

# ಅಂದದ ಮೂಗುತಿ



ಫ್ಯಾಷನೆಬಲ್ ಆಗಿ ಕಾಣುವ ಮೂಗುತಿಯನ್ನು ತೊಡಲು ಮೂಗು ಚುಚ್ಚಿಸಿಕೊಳ್ಳುವ ಅಗತ್ಯವಿಲ್ಲ. ಇದೀಗ ಪ್ರೆಸ್ ಮಾಡಿ ತೊಟ್ಟುಕೊಳ್ಳುವ ಮೂಗುತಿ ಜನಪ್ರಿಯವಾಗುತ್ತಿದೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ

■ (ಚಿತ್ರಕೃಪೆ: ಮುಳಿಯ ಕೇಶವಭಟ್ಟ ಅಂಡ್ ಸನ್ಸ್)



ಗಿಣಿ ಮೂಗು, ಸಂಪಿಗೆ ಮೂಗು, ಗುಂಡಗಿನ ಮೂಗು, ಚೂಪು ಮೂಗು, ಉದ್ದ ಮೂಗು, ಚಿಕ್ಕ ಮೂಗು ಹೀಗೆ ಎಷ್ಟೊಂದು ತರದ ಮೂಗು ಇರುತ್ತದೆ. ನಾಸಿಕದ ಆಕಾರದಲ್ಲಿ ಹಲವಾರು ತರ. ಮೂಗುತಿ ತೊಡುವುದು ಮುಖಕ್ಕೆ ಲಕ್ಷಣವಾಗಿ ಕಾಣುವುದಕ್ಕೆ.

ಮೂಗುತಿಯಲ್ಲೂ ಎಷ್ಟೊಂದು ತರ ತರದ ವಿನ್ಯಾಸ ಹೊಂದಿರುವ ಮೂಗುತಿಗಳು ಈಗ ಮಾರುಕಟ್ಟೆಯಲ್ಲಿ ಲಭ್ಯ. ಹಿಂದೆ ಎಲ್ಲಾ ಕಡೆಗಳಲ್ಲೂ ಮೂಗುತಿಗಳ ವಿನ್ಯಾಸ ಹೆಚ್ಚು ಕಡಿಮೆ ಒಂದೇ ತೆರನಾಗಿ ಇತ್ತು. ಆದರೆ ಈಗ ಹಾಗಲ್ಲ; ಮೂಗುತಿಯಲ್ಲಿ ಕಣ್ಣಿಗೊಪ್ಪುವ ವಿನ್ಯಾಸದ ಒಡವೆ ಬಂದಿದೆ. ವಿವಿಧ ವಿನ್ಯಾಸಗಳನ್ನು ಎಲ್ಲ ಮಹಿಳೆಯರು ಇಷ್ಟಪಟ್ಟು ಆರಿಸಿಕೊಂಡು ತೊಟ್ಟುಕೊಳ್ಳುತ್ತಾರೆ.

ಮೂಗುತಿಯನ್ನು ತೊಡಲು ಮೂಗು ಚುಚ್ಚಿಸಿಕೊಳ್ಳ ಬೇಕೆಂದೇನಿಲ್ಲ. ಪ್ರೆಸ್ ಮಾಡಿ ತೊಟ್ಟುಕೊಳ್ಳುವಂತಹ ಮೂಗುತಿಯೂ ಈಗ ಸಿಗುತ್ತದೆ. ಅಂದರೆ ಸಮಾರಂಭಗಳಿಗೆ ಹೋಗುವಾಗ ತೊಟ್ಟುಕೊಂಡು ಅನಂತರ ತೆಗೆದಿಡಬಹುದು. ಇದರಲ್ಲೂ ಒಂದು ಕಲ್ಲಿನದು, ನಾಲ್ಕು ರೂಬಿ ಹರಳುಗಳನ್ನು ಹೊಂದಿರುವುದು ಎ.ಡಿ ಕಲ್ಲನ್ನು ಹೊಂದಿರುವುದು.. ಹೀಗೆ ಬೇಕಾದ ತರದಲ್ಲಿ ಸಿಗುತ್ತದೆ. ಈ ತರದ ಮೂಗುತಿಯು ವಿವಿಧ ಆಕಾರಗಳಲ್ಲಿ ಇರುತ್ತವೆ. ಇದರ ಅಡಿ ಭಾಗ ಸ್ವಲ್ಪ ಸ್ಪ್ರಾಂಗ್ ಆಗಿದ್ದು ತುದಿಯಲ್ಲಿ ಚಿನ್ನದ ಚಪ್ಪಟೆ ಗುಂಡು ಇರಬೇಕು. ಇಲ್ಲವಾದಲ್ಲಿ ಅದು ಮೂಗಿಗೆ ಚುಚ್ಚುತ್ತದೆ. ತೊಟ್ಟಾದ ಮೇಲೆ ಗಟ್ಟಿಯಾಗಿ ಪ್ರೆಸ್ ಮಾಡಬೇಕು. ಚರ್ಮ ನುಗ್ಗುವಷ್ಟು ಭಾಗ ಅಗಲಿಸಿ ತೊಡಬೇಕು. ಪ್ರೆಸ್ ಮಾಡುವ ಮೂಗುತಿಗಳು ಹೊರಭಾಗದಿಂದಾಗಿ ಒಳ ಬಂದು ಪುನಃ ಮೂಗಿನ ತುದಿಯಿಂದ ಸ್ವಲ್ಪ ಮೇಲ್ಭಾಗದವರೆಗಿರಬೇಕು; ಇಲ್ಲವಾದಲ್ಲಿ ಬಿದ್ದು ಹೋಗುತ್ತವೆ.

ಮೂಗು ಚುಚ್ಚಿಸಿಕೊಂಡವರು ಸ್ವಲ್ಪ ಭಾರವಾದ ಡಿಸೈನ್ ಹೊಂದಿದನ್ನು ಬಳಸಬಹುದು. ರಿಂಗ್ ಬಳಸಲು ಇಷ್ಟಪಡುವವರು ಅದರ ಕೊಂಡಿಯನ್ನು ಒಳಭಾಗದಲ್ಲಿ ಬರುವಂತೆ ಹಾಕಿಕೊಳ್ಳಿ. ಮೂಗಿನ ತೂತಿನಿಂದ ಚರ್ಮ ಸ್ವಲ್ಪ ಬಿಡುವಾಗಿ ಇರುವಂತಹ ರಿಂಗನ್ನು ಖರೀದಿಸಿ ಧರಿಸಿ. ತುಂಬ ಟೈಟ್ ಇರುವುದನ್ನು ಧರಿಸಿದರೆ ನೋವಾಗುವ ಸಂಭವವಿದೆ. ಚುಚ್ಚುವಾಗಲೂ ಸರಿಯಾದ ಜಾಗಕ್ಕೆ ಮಾರ್ಕ್ ಮಾಡಿ ಅದರಂತೆಯೇ ಗನ್ ಶಾಟ್ ಅಥವಾ ನಿಮಗೆ ಬೇಕಾದ ವಿಧಾನದಲ್ಲಿ ಚುಚ್ಚಿಸಿಕೊಳ್ಳಿ.

ರೂಬಿ ಕೂರಿಸಿ ಪ್ರೆಸ್ ಮಾಡುವ ಮೂಗುತಿ ಆ್ಯಂಟಿಕ್ ಆಭರಣಗಳಿಗೆ ಹೊಂದಿಕೊಳ್ಳುತ್ತದೆ. ಬಿಳಿ ಕಲ್ಲು ಅಥವಾ ಪ್ಲೈನ್ ಚಿನ್ನದ ಮೂಗುತಿಗಳು ಎಲ್ಲದಕ್ಕೂ ಹೊಂದಿಕೊಳ್ಳುತ್ತದೆ.

* ಉದ್ದ ಮೂಗು ಹೊಂದಿರುವವರು ಚಿಕ್ಕದಾದ ಮೂಗುತಿ ಬಹಳ ಚೆನ್ನಾಗಿ ಒಪ್ಪುತ್ತದೆ.
* ದುಂಡಗಿನ ಮೂಗನ್ನು ಹೊಂದಿದವರಿಗೆ ರಿಂಗ್ ಅಥವಾ ಉದ್ದದ ಕೊಂಡಿಯನ್ನು ಹೊಂದಿದ ಮೂಗುತಿ ಹಾಕಿದಾಗ ಮೂಗು ಸ್ವಲ್ಪ ಉದ್ದವಾಗಿ ಗೋಚರಿಸುತ್ತದೆ.
* ರಿಂಗ್ ಹಾಕಿದರೆ ಮೂಗಿನಲ್ಲಿ ಮೂಗುತಿ ಎದ್ದು ಕಾಣುತ್ತದೆ
* ರೂಬಿ ಬಿಳಿ ಕಲ್ಲಿನ ಪ್ರೆಸ್ ಮಾಡುವಂತಹ ಮೂಗುತಿಗಳು ಸಾಧಾರಣವಾಗಿ 4 ಕಲ್ಲುಗಳನ್ನಾದರೂ ಹೊಂದಿದ್ದಾಗ ಮಾತ್ರ ಎದ್ದು ಕಾಣುತ್ತದೆ.
* ಹಿಂದೆ ಸೇವಂತಿಗೆ, ತಾವರೆಯ ದಳಗಳನ್ನು ಹೊಂದಿದ ಮೂಗುತಿ ನಿತ್ಯ ಬಳಕೆಯಲ್ಲೂ ಬಳಸುತ್ತಿದ್ದರು. ಎರಡು ಮೂಗುತಿ ಮಾಡಿಸಿದರೆ ಕಿವಿಗೂ ಧರಿಸಬಹುದು. ■